# ಗುರುಪೂರ್ಣಿಮಾ-ಗುರು ರಾಮಕೃಷ್ಣ

◆ ಸ್ವಾಮಿ ರಾಘವೇಶಾನಂದ

ಹಿಂದೂ ಸಂಸ್ಕೃತಿಯ ಒಂದು ವಿಶೇಷವೆಂದರೆ, ಪ್ರತಿ ದಿನವೂ ಶುಭದಿನವೇ, ಪ್ರತಿದಿನವೂ ಹಬ್ಬವೇ. ಭಗವಂತನನ್ನು ಪೂಜಿಸಲು ವಿಶೇಷವಾದ ದೇಶವಾಗಲಿ, ಕಾಲವಾಗಲಿ, ಬೇಕಾಗಿಲ್ಲ. ಆದರೂ ಶಾಸ್ತ್ರಗಳ ಪ್ರಕಾರ ಭಗವಂತನ ಆವಿರ್ಭಾವ ಕೆಲವು ವಿಶೇಷ ದಿನಗಳಲ್ಲಿ ಹೆಚ್ಚಾಗಿರುತ್ತದೆ, ಭಗವಂತನು ಎಲ್ಲೆಡೆಯೂ ಇರುವವನಾದರೂ ದೇವಸ್ಥಾನಗಳಲ್ಲಿ ವಿಶೇಷವಾಗಿ ಇರುವಂತೆ. ಗುರುಪೂರ್ಣಿಮಾ ಅಂಥ ಒಂದು ವಿಶೇಷ ದಿನ. ಇದಕ್ಕೆ ಇನ್ನೊಂದು ಹೆಸರು ವ್ಯಾಸಪೂರ್ಣಿಮಾ—ಭಗವಾನ್ ವೇದವ್ಯಾಸರು ಜನಿಸಿದ ಆಷಾಢಮಾಸ, ಶುಕ್ಲಪಕ್ಷ, ಪೂರ್ಣಿಮಾ ತಿಥಿ. ಮಹಾತ್ಮರೂ ಬ್ರಹ್ಮಜ್ಞಾನಿಗಳೂ, ತಪಸ್ವಿಗಳೂ ಆದ ಅವರು ಅವತರಿಸಿದ ದಿನ ಆಧ್ಯಾತ್ಮ ಸಾಧಕರಿಗೆ ಶ್ರೇಷ್ಠವಾದ ದಿನ. ಪೂರ್ಣಿಮಾ ತಿಥಿಯು ಸಾಧಕರಿಗೆ ಅತ್ಯಂತ ಉತ್ಕೃಷ್ಟವೆಂದೂ, ಈ ದಿನದಂದು ಸಾಧಕರು ಮಾಡುವ ಜಪ, ತಪ, ದಾನ, ಧರ್ಮ, ವ್ರತ, ಉಪವಾಸ, ಪೂಜೆಗಳಿಗೆ ವಿಶೇಷ ಫಲ ಉಂಟೆಂದೂ ನಂಬಿಕೆ. ಆಷಾಢ ಪೂರ್ಣಿಮಾ ಅಥವಾ ಗುರು ಪೂರ್ಣಿಮಾ, ಕಾರ್ತಿಕಮಾಸದ ಪೂರ್ಣಿಮಾ ಅಥವಾ ಗೌರಿ ಪೂರ್ಣಿಮಾ, ಮಾರ್ಗಶೀರ್ಷ ಮಾಸದ ಪೂರ್ಣಿಮಾ ಅಥವಾ ದತ್ತಜಯಂತಿ ಹಾಗೂ ವೈಶಾಖ ಮಾಸದ ಪೂರ್ಣಿಮಾ ಅಥವಾ ಬುದ್ಧಜಯಂತಿ—ಈ ನಾಲ್ಕು ಪೂರ್ಣಿಮೆಗಳು ಅತಿ ವಿಶೇಷ.

ಇದರಲ್ಲಿ ಆಷಾಢ ಶುದ್ಧ ಪೂರ್ಣಿಮಾ ವೇದವ್ಯಾಸರ ಜನ್ಮ ದಿನ. ಅವರು ವಸಿಷ್ಠರ ಮರಿಮಗ, ಶಕ್ತಿ ಮಹರ್ಷಿಗಳ ಮೊಮ್ಮಗ, ಪರಾಶರರ ಮಗ, ಹಾಗೂ ಶುಕಮುನಿಗಳ ತಂದೆ. ವ್ಯಾಸರಿಗೆ ಹಲವು ಹೆಸರುಗಳಿವೆ: ೧. ವಾಸಿಷ್ಠ, ಅಂದರೆ ವಸಿಷ್ಠ ವಂಶದಲ್ಲಿ ಹುಟ್ಟಿದವರು; ೨. ಪಾರಾಶರ, ಅಂದರೆ, ಪರಾಶರರ ಸುಪುತ್ರರು; ೩. ವೇದವ್ಯಾಸರು, ಅಂದರೆ ವೇದಗಳ ರಾಶಿಯನ್ನು ತಮ್ಮ ತಪಸ್ಸಿನಿಂದ ನಾಲ್ಕು ಭಾಗಗಳಾಗಿ ವಿಭಜಿಸಿದ ಜ್ಞಾನಮೂರ್ತಿ. ಹಾಗೆ ವಿಭಜನೆ ಮಾಡಿದ ಮೇಲೆ ಋಗ್ವೇದವನ್ನು ಪೈಲನಿಗೂ, ಯಜುರ್ವೇದವನ್ನು ವೈಶಂಪಾಯನನಿಗೂ, ಸಾಮವೇದವನ್ನು ಜೈಮಿನಿಗೂ, ಅಥರ್ವವೇದವನ್ನು ಸುಮಂತುವಿಗೂ ಅಧ್ಯಯನ ಮಾಡಿಸಿ, ವೇದಗಳನ್ನು ಕಾಪಾಡಿದರು. ೪. ಬಾದರಾಯಣ – ಅಂದರೆ ಬದರೀಕ್ಷೇತ್ರದಲ್ಲಿ ದೀರ್ಘಕಾಲ ತಪಸ್ಸು ಮಾಡಿ, ಶ್ರೀಮನ್ನಾರಾಯಣನ ಅನುಗ್ರಹಕ್ಕೆ ಪಾತ್ರರಾದುದರಿಂದ ಬಾದರಾಯಣ ಎಂಬ ಹೆಸರು. ೫. ವಿಷ್ಣು ಕಲೋದ್ಭವ – ಅಂದರೆ ಮಹಾವಿಷ್ಣುವಿನ ಒಂದು ಅಂಶವಾದುದರಿಂದ ಈ ಹೆಸರು. ೬. ಕೃಷ್ಣ ದ್ವೈಪಾಯನ – ಬಣ್ಣದಲ್ಲಿ ಕಪ್ಪಾದುದರಿಂದ ಕೃಷ್ಣನೂ, ದ್ವೀಪದಲ್ಲಿ ಹುಟ್ಟಿದುದರಿಂದ ದ್ವೈಪಾಯನರೂ ಆದರು.

ವ್ಯಾಸಪೂರ್ಣಿಮೆಯಿಂದ ಚಾತುರ್ಮಾಸ್ಯ ಪ್ರಾರಂಭವಾಗುತ್ತದೆ. ಹಿಂದಿನ ಕಾಲದಲ್ಲಿ ಸಂನ್ಯಾಸಿಗಳು ಪರಿವ್ರಾಜಕರಾಗಿ ಜೀವನ ನಡೆಸುತ್ತಿದ್ದರು. ಆದರೆ ಮಳೆಗಾಲ ಬಂದಾಗ ಪರ್ಯಟನ ಕಷ್ಟವಾಗುತ್ತಿದ್ದುದರಿಂದ, ಯಾವುದಾದರೂ ಒಂದು ಕಡೆ ನಾಲ್ಕು ತಿಂಗಳ ಕಾಲ ವಾಸಿಸುತ್ತಾ, ಅಧ್ಯಯನ ಹಾಗೂ ಅಧ್ಯಾಪನವನ್ನು ಮಾಡುತ್ತಿದ್ದರು. ಈ ನಾಲ್ಕು ತಿಂಗಳ ಅವಧಿಗೆ ಚಾತುರ್ಮಾಸ್ಯ ಎಂದು ಹೆಸರು. ಆದರೆ ನಮ್ಮ ಶಾಸ್ತ್ರಗಳ ಪ್ರಕಾರ ಈ ವ್ರತ ಸಂನ್ಯಾಸಿಗಳಿಗೆ ಮಾತ್ರ ಸೀಮಿತವಲ್ಲ, ಸಾಧುಗಳಿಗೆ ಹಾಗೂ ಸಾಧಕ ಭಕ್ತರಿಗೆ ಇಬ್ಬರಿಗೂ ಇದು ಅನ್ವಯಿಸುತ್ತದೆ. **ಚಾತುರ್ಮಾಸ್ಯ ಸಮಂ ನಾಸ್ತಿ ವ್ರತಂ ಲೋಕೇ ಚ ಪಾವನಂ, ಶೃಣ್ವಂತು ಸಾಧವೋ ಭಕ್ತಾಃ, ವ್ರತಂ ಇಷ್ಟಾರ್ಥಸಾಧನಮ್** —'ಪುಣ್ಯಾತ್ಮರಾದ ಸಾಧಕರೇ, ಭಕ್ತರೇ, ಕೇಳಿರಿ. ಚಾತುರ್ಮಾಸ್ಯಕ್ಕೆ ಸಮವಾದ ವ್ರತವಿಲ್ಲ. ಈ ವ್ರತದಿಂದ ನೀವು ಇಚ್ಛೆಪಟ್ಟಿದ್ದನ್ನು ಪಡೆಯಬಹುದು." ಧರ್ಮಸಿಂಧು, ನಿರ್ಣಯಸಿಂಧು ಮುಂತಾದ ಶಾಸ್ತ್ರಗಳಲ್ಲಿ ಈ ವ್ರತದ ಬಗ್ಗೆ ಹೆಚ್ಚಿನ ವಿವರಣೆಯನ್ನು ಪಡೆಯಬಹುದು.

ವ್ಯಾಸಪೂರ್ಣಿಮೆಯಂದು ವ್ಯಾಸರು ತಮ್ಮ ಅವತಾರವನ್ನು ಪರಿಸಮಾಪ್ತಿ ಮಾಡಿದರು ಎಂಬ ಪ್ರತೀತಿಯೂ ಇದೆ. ಅವರು ದೇಹತ್ಯಾಗ ಮಾಡುವ ವಿಷಯವನ್ನು ಮುಂಚಿತವಾಗಿಯೇ ತಮ್ಮ ಶಿಷ್ಯರಿಗೆ ತಿಳಿಸಿದರಂತೆ. ಶಿಷ್ಯರು ಗುರುಗಳ ವಿಯೋಗವನ್ನು ಇಚ್ಛಿಸದೆ ತುಂಬಾ ದುಃಖಿತರಾದರು. ಆಗ ಅವರು ತಮ್ಮ ಶಿಷ್ಯರನ್ನು ಕುರಿತು, "ಮಕ್ಕಳೇ, ನನ್ನ ಶರೀರತ್ಯಾಗದಿಂದ ನೀವು ಪರಿತಾಪವನ್ನು ಹೊಂದಬೇಕಾಗಿಲ್ಲ.

ಗುರುಪೂರ್ಣಿಮೆಯನ್ನು ಜುಲೈ ೨೧ರಂದು ಆಚರಿಸಲಾಗುವುದು. ಗುರುವಿನ ಮಹತ್ವವನ್ನೂ ಸದ್ಗುರುವಾಗಿ ಶ್ರೀರಾಮಕೃಷ್ಣರ ಶ್ರೇಷ್ಠತೆಯನ್ನೂ ವಿವರಿಸಿರುವ ಸ್ವಾಮಿ ರಾಘವೇಶಾನಂದಜಿಯವರು ಬೆಳಗಾಂನ ರಾಮಕೃಷ್ಣ ಮಿಶನ್ನಿನ ಮುಖ್ಯಸ್ಥರು.

ನನ್ನ ಆತ್ಮವು ದೇಹತ್ಯಾಗವನ್ನು ಮಾಡಿದ ನಂತರ ಈ ಲೋಕದ ಎಲ್ಲಾ ಜ್ಞಾನಿಗಳನ್ನು ವ್ಯಾಪಿಸಿ ನೆಲೆಸುತ್ತದೆ. ನೀವು ಯಾವ ಜ್ಞಾನಿಗಳನ್ನು ಪೂಜಿಸಿದರೂ ನನ್ನನ್ನು ಪೂಜಿಸಿದಂತೆಯೇ. ಜ್ಞಾನಪ್ರಸಾರ ಮಾಡುವವರೆಲ್ಲರೂ ನನ್ನ ಸ್ವರೂಪರೇ. ಆದ್ದರಿಂದ ಜ್ಞಾನಿಗಳನ್ನು ಪೂಜಿಸಿ" ಎಂದು ಹೇಳಿದರು. ಇದು ಶ್ರೀಕೃಷ್ಣನ **ಜ್ಞಾನೀ ತು ಆತ್ಮೈವ ಮೇ ಮತಂ**—*ನನ್ನ ಮತದಂತೆ ಜ್ಞಾನಿಯಾದವನು ನನ್ನ ಆತ್ಮವೇ ಆಗಿದ್ದಾನೆ* ಎಂಬ ನುಡಿಯಂತಿದೆ. ಆದ್ದರಿಂದಲೇ ವ್ಯಾಸ ಪೂರ್ಣಿಮೆಯನ್ನು ಗುರುಪೂರ್ಣಿಮೆಯಂತೆ ಆಚರಿಸುವ ಪದ್ಧತಿ ಇದೆ.

ಗುರುವಿನ ವಿಷಯಕ್ಕೆ ಬಂದಾಗ ಶ್ರೀರಾಮಕೃಷ್ಣರು ಹೇಳುವಂತೆ ಸಚ್ಚಿದಾನಂದನೊಬ್ಬನೇ ಗುರು. ಶ್ರೀರಾಮಕೃಷ್ಣರ ಭಕ್ತರ ಪಾಲಿಗಂತೂ ಶ್ರೀರಾಮಕೃಷ್ಣರೇ ಸಚ್ಚಿದಾನಂದ ಸ್ವರೂಪದ ಗುರು. ಶ್ರೀರಾಮಕೃಷ್ಣರು ಹೇಳುವಂತೆ ಗುರುವಿನ ಸಹಾಯವಿಲ್ಲದೆ ಭಗವಂತನ ದರ್ಶನ ಸಾಧ್ಯವಿಲ್ಲ. ಎಲ್ಲಾ ಮಹಾತ್ಮರೂ ಗುರುಗಳನ್ನು ಆಶ್ರಯಿಸಿಯೇ ಜ್ಞಾನ ಪಡೆದರು. ಶ್ವೇತಕೇತುವಿನ ಗುರು ಉದ್ದಾಲಕ, ಮೈತ್ರೇಯಿಯ ಗುರು ಯಾಜ್ಞವಲ್ಕ್ಯ, ಭೃಗುವಿನ ಗುರು ವರುಣ, ನಾರದರ ಗುರು ಸನತ್ಕುಮಾರ, ನಚಿಕೇತನ ಗುರು ಯಮ, ಇಂದ್ರನ ಗುರು ವಸಿಷ್ಠ, ದೇವತೆಗಳ ಗುರು ಬೃಹಸ್ಪತಿ ಇತ್ಯಾದಿ.

ನರನನ್ನು ಹರನನ್ನಾಗಿ ಮಾಡುವವನು ಗುರು. ಬಸವೇಶ್ವರರು ತಮ್ಮ ಒಂದು ವಚನದಲ್ಲಿ ಗುರುವಿನ ಮಹಾತ್ಮೆಯನ್ನು ಬಹಳ ಮಾರ್ಮಿಕವಾಗಿ ವರ್ಣಿಸುತ್ತಾರೆ.

**ಮಡಕೆಯ ಮಾಡುವಡೆ ಮಣ್ಣೇ ಮೊದಲು**
**ತೊಡಿಗೆಯ ಮಾಡುವಡೆ ಹೊನ್ನೇ ಮೊದಲು**
**ಶಿವಪಥವನರಿವಡೆ ಗುರುಪಥವೆ ಮೊದಲು**
**ಕೂಡಲಸಂಗಮದೇವರನರಿವಡೆ**
**ಶರಣರ ಸಂಗವೇ ಮೊದಲು.**

ಮಣ್ಣಿಲ್ಲದೆ ಹೇಗೆ ಮಡಕೆಯನ್ನು ಮಾಡಲಾಗದೋ ಚಿನ್ನವಿಲ್ಲದೆ ಹೇಗೆ ಆಭರಣವನ್ನು ಮಾಡಲಾಗದೋ, ಅಂತೆಯೇ ಗುರುವಿಲ್ಲದೆ ಶಿವನನ್ನು ಅರಿಯಲಾಗದು. ಗುರುವು, ಭಕ್ತನಿಗೂ ಭಗವಂತನಿಗೂ ಮಧ್ಯೆ ಇರುವ ಸೇತುವೆಯಂತೆ. ಗುರುವು ಭಗವಂತನನ್ನು ಭಕ್ತನ ಕೈವಶಕ್ಕೆ ತಂದುಕೊಡುವನು. ಮಾತೆ ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಗುರುವಿನ ಮಹತ್ವವನ್ನು ಸುಂದರವಾಗಿ ವಿವರಿಸುತ್ತಾಳೆ:

**ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ**
**ಭವಬಂಧನ ಬಿಡಿಸಿ ಪರಮ ಸುಖವ ತೋರಿದ ಗುರುವೇ**
**ಭವಿ ಎಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ**
**ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೇ**
**ನಮೋ ನಮೋ**

ಜೀವನು ಮೊದಲು ತಾನು ದೇಹ ಎಂದು ಭಾವಿಸಿ ದೇಹದ ಮೇಲೆ ಅಭಿಮಾನ ಬೆಳೆಸಿಕೊಂಡು ನರನಾಗಿದ್ದನು. ಗುರುವಿನ ಉಪದೇಶದಿಂದ ದೇಹಾಭಿಮಾನ ನೀಗಿ ತಾನು ಆತ್ಮವೆಂದು ತಿಳಿದು ದೇವನಾದನು. ಗುರುಗೀತೆಯಲ್ಲಿ ಒಂದು ಶ್ಲೋಕವುಂಟು:

**ಅಜ್ಞಾನ-ತಿಮಿರಾಂಧಸ್ಯ ಜ್ಞಾನಾಂಜನ-ಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

"ಅಜ್ಞಾನವೆಂಬ ತಿಮಿರದಿಂದ ಅಂಧನಾದವನ ಕಣ್ಣನ್ನು ಜ್ಞಾನವೆಂಬ ಅಂಜನಶಲಾಕೆಯಿಂದ ಬಿಡಿಸಿದ ಶ್ರೀಗುರುವಿಗೆ ನಮಸ್ಕಾರ." ಸಾವಿರ ವರ್ಷಗಳ ಕತ್ತಲೆ ಇರಲಿ, ಚಿಕ್ಕ ದೀಪವನ್ನು ಬೆಳಗಿಸಿದ ತಕ್ಷಣವೇ ಕತ್ತಲೆಯೆಲ್ಲ ಓಡಿಹೋಗುವುದು. ಹಾಗೆಯೇ ಸಾವಿರ ಜನ್ಮದ ಅಜ್ಞಾನದ ಅಂಧಕಾರದಿಂದ ಜೀವನು ಬಂಧಿತನಾಗಿರಬಹುದು. ಜೀವನದಲ್ಲಿ ಜ್ಞಾನಭಾಸ್ಕರನಾದ ಶ್ರೀಗುರುವಿನ ಆಗಮನವಾದ ತಕ್ಷಣ ಅಜ್ಞಾನದ ಅಂಧಕಾರವೆಲ್ಲ ಕಳೆದು ಅವನು ಮುಕ್ತನಾಗುವನು. ದಾಸಶ್ರೇಷ್ಠರಾದ ಪುರಂದರದಾಸರು, 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ. ಶಿಷ್ಯನು ಗುರುವಿನ ಹತ್ತಿರದಲ್ಲಿಯೇ ಇರಬೇಕು. ಹೇಗೆಂದರೆ ಸರ್ವಜ್ಞ ಹೇಳುತ್ತಾರೆ:

**ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡನಾಗಿ**
**ಮತ್ತೆ ಪಾದದ ಕೆರನಾಗಿ, ಗುರುವಿನ**
**ಹತ್ತಿಲಿರು ಎಂದ ಸರ್ವಜ್ಞ**

ಎತ್ತಾಗಿ, ತೊತ್ತಾಗಿ ಅಂದರೆ ಸೇವಕನಾಗಿ ಹಿತ್ತಲದ ಗಿಡವಾಗಿ ಕೊನೆಗೆ ಶ್ರೀಗುರುವಿನ ಪಾದರಕ್ಷೆಯಾಗಿ ಸದ್ಗುರುವಿನ ಹತ್ತಿರದಲ್ಲಿ ವಿನಯದಿಂದಿರಬೇಕು. ಹೀಗೆ ಎಲ್ಲ ಮಹಾತ್ಮರೂ ಗುರುವಿನ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ.

ಅನುಷ್ಠಾನದ ವಿಷಯದಲ್ಲಿ ಗುರುವನ್ನು ಸ್ವೀಕರಿಸುವಾಗ ನಾವು ಒಬ್ಬರನ್ನೇ ಗುರುವಾಗಿ ಸ್ವೀಕರಿಸಬೇಕು. ಉಳಿದವರು ಸಹಾಯ ಮಾಡಿದರೆ ಅವರು ಸಹಾಯಕ ಗುರುಗಳಾಗುವರೇ ಹೊರತು, ಗುರುಗಳಾಗುವುದಿಲ್ಲ. ಇಲ್ಲದೇ ಇದ್ದರೆ ಒಬ್ಬ ರೋಗಿ ಏಕಕಾಲಕ್ಕೆ ಹಲವು ವೈದ್ಯರುಗಳಿಂದ ಚಿಕಿತ್ಸೆ ಪಡೆದಂತೆ ಆಗುವುದು. ಆಂಗ್ಲಭಾಷೆಯಲ್ಲಿ ಒಂದು ಮಾತುಂಟು. —"Listen to all, but follow one, respect all, but adore one, gather knowledge from all, but adopt the teachings of one guru."

(ಎಲ್ಲರ ಮಾತನ್ನೂ ಕೇಳು. ಆದರೆ ಒಬ್ಬನನ್ನೇ ಅನುಸರಿಸು. ಎಲ್ಲರನ್ನೂ ಗೌರವಿಸು, ಆದರೆ ಒಬ್ಬನನ್ನೇ ಪೂಜಿಸು. ಎಲ್ಲರಿಂದಲೂ ಜ್ಞಾನಸಂಗ್ರಹ ಮಾಡು, ಆದರೆ ಗುರುವಿನ ಮಾತನ್ನು ಮಾತ್ರ ಜೀವನದಲ್ಲಿ ಅಳವಡಿಸಿಕೋ.) ಎಲ್ಲ ಮಂತ್ರಗಳಲ್ಲೂ ಶಕ್ತಿ ಇದೆ. ಆದರೆ ಆ ಶಕ್ತಿ ಒಂದು ವೃಕ್ಷದ ಬೀಜದಂತೆ ಮಂತ್ರದಲ್ಲಿ ಹುದುಗಿದೆ. ಆ ಬೀಜಕ್ಕೆ ಬೆಳೆದು ದೊಡ್ಡ ಮರವಾಗುವ ಶಕ್ತಿ ಇದೆ. ಆದರೆ ಆ ಬೀಜವನ್ನು ಮಣ್ಣಿನಲ್ಲಿ ಹಾಕಿ, ಸಾಧನೆಯ ನೀರು ಉಣಿಸದಿದ್ದರೆ ಅದು ಮೊಳಕೆಯೊಡೆಯದೆ, ವೃಕ್ಷವಾಗಿ ಬೆಳೆಯದೆ ಹೋಗಬಹುದು. ಮಂತ್ರವಾಗಿ ಸಾಧಿತವಾಗದೆ ಹೋದದ್ದು ಕೇವಲ ಶುಷ್ಕ ವಾದ ಪದವಾಗಿ ಉಳಿಯಬಹುದು. ಮಂತ್ರ ಎನ್ನುವ ಪದಕ್ಕೆ ಅರ್ಥವೇ **ಮನನಾತ್ ತ್ರಾಯತೇ ಇತಿ ಮಂತ್ರಃ** ಎಂದು. ಮತ್ತೆ ಮತ್ತೆ ಮನನ ಮಾಡುವುದರಿಂದ ಯಾವುದು ನಮ್ಮನ್ನು ರಕ್ಷಿಸುವುದೋ ಅದೇ ಮಂತ್ರ. ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿ ಹಾಗೂ ಸಂಸ್ಕಾರವನ್ನು ಆಧರಿಸಿ ನಾಲ್ಕು ವಿಧದ ಶಿಷ್ಯರು ಇರುತ್ತಾರೆ. ಮೊದಲನೆಯ ಶಿಷ್ಯ ಪೆಟ್ರೋಲಿನಂತೆ. ಗುರುವಿನ ಕಿಡಿ ದೂರದಿಂದ ಹಾರಿದರೆ ಸಾಕು, ತಕ್ಷಣ ಅದು ಹತ್ತಿಕೊಳ್ಳುತ್ತದೆ. ಎರಡನೆಯ ಶಿಷ್ಯ ಕರ್ಪೂರದಂತೆ. ಗುರು ಹತ್ತಿರ ಬಂದು ಹತ್ತಿಸಿದರೆ ಹತ್ತಿ ಕೊಳ್ಳುತ್ತದೆ. ಮೂರನೆಯ ಶಿಷ್ಯ ಇದ್ದಲಿನಂತೆ. ಗುರು ಊದಿ ಊದಿ, ಬೆಂಕಿ ಹತ್ತಿಸ ಬೇಕು. ನಾಲ್ಕನೇ ಶಿಷ್ಯ ಬಾಳೆಯ ದಿಂಡಿನಂತೆ. ಗುರು ಎಷ್ಟು ಬೆಂಕಿ ಹಾಕಿದರೂ ಹತ್ತುವುದಿಲ್ಲ. ಪಾಪ, ಗುರು ಏನು ತಾನೇ ಮಾಡಿಯಾನು?

ಈ ಯುಗದಲ್ಲಿ ಅತಿ ಕರುಣಾಳುವಾದ ಭಗವಾನ್ ಶ್ರೀರಾಮಕೃಷ್ಣರು ಗುರುವಾಗಿ ಬಂದು ಎಲ್ಲರನ್ನೂ ದೈವತ್ವ ದೆಡೆಗೆ ಮೇಲೆತ್ತುತ್ತಿದ್ದಾರೆ. ಸ್ವಾಮಿ ಶಾರದಾನಂದರು ಅವರನ್ನು **ಆಚಾರ್ಯಾಣಾಂ ಮಹಾಚಾರ್ಯಃ** ಎಂದರೆ ಗುರುಗಳಲ್ಲಿ ಮಹಾಗುರು ಎಂದಿದ್ದಾರೆ. ಸ್ವಾಮಿ ವಿವೇಕಾನಂದರು ಅವರನ್ನು **ಅವತಾರವರಿಷ್ಠ** ಎಂದು ಗುರುತಿಸಿದ್ದಾರೆ. ಅವರು ಗುರುವೂ ಹೌದು, ದೇವರೂ ಹೌದು. ಆದರೆ, ಅವರನ್ನು ಗುರುವಾಗಿಯಾಗಲೀ, ದೇವರಾಗಿಯಾಗಲೀ ಅರ್ಥ ಮಾಡಿ ಕೊಳ್ಳುವುದು ಕಷ್ಟ. ಅವರು ತಾವಾಗೇ ತಮ್ಮ ಸ್ವರೂಪವನ್ನು ತೋರಿಸುವವರೆಗೆ ಅವರನ್ನು ಅರ್ಥಮಾಡಿಕೊಳ್ಳಲು ಯಾರಿಗೆ ತಾನೇ ಸಾಧ್ಯ! ಅವರು ತಮ್ಮ ಜೀವಿತಕಾಲದಲ್ಲಿ ಹಲವರಿಗೆ ತಮ್ಮ ಸ್ವರೂಪವನ್ನು ತೋರಿಸಿದರು, ಅದು ಚರಿತ್ರೆ. ಈಗಲೂ ಭಕ್ತಶ್ರೇಷ್ಠರಿಗೆ ತಮ್ಮ ಸ್ವರೂಪವನ್ನು ತೋರಿಸುತ್ತಿದ್ದಾರೆ, ಇದು ಪವಾಡ. ಆದರೆ ಅವರ ಪವಾಡ ಭಕ್ತನನ್ನು ಭಗವಂತನೆಡೆಗೆ ಕರೆದೊಯ್ಯುವಷ್ಟಕ್ಕೆ ಮಾತ್ರ ಸೀಮಿತ. ಅವರು ಬದುಕಿದ್ದಾಗ, ತಾವು ಯಾರು ಎಂಬುದನ್ನು ಎಷ್ಟೊಂದು ವಿಧವಾಗಿ ತೋರಿಸಿದರು!

ಆಗಿನ ಕಾಲದ ಪಂಡಿತಶ್ರೇಷ್ಠರೆಲ್ಲ ಅವರನ್ನು ಅವತಾರ ಎಂದು ನಮಿಸಿದರು. ದಶಾವತಾರಕ್ಕಿಂತ ಹೆಚ್ಚಿಗೆ ಅವತಾರ ಗಳನ್ನು ಒಪ್ಪದ ಮಥುರನಾಥ ಬಾಬು ಅವರಲ್ಲಿ ಶಿವ, ಕಾಳಿಯ ದರ್ಶನ ಪಡೆದು ಧನ್ಯನಾದ. ತಾಂತ್ರಿಕ ಗುರುವಾಗಿ ಬಂದ ಭೈರವೀ ಬ್ರಾಹ್ಮಣಿ ಅವರಲ್ಲಿ ಚೈತನ್ಯ ಮಹಾಪ್ರಭು ವಿನ ದರ್ಶನ ಪಡೆದಳು. ಅತಿ ದೊಡ್ಡ ಭಕ್ತೆ ಗೋಪಾಲೇರ್ ಮಾ ಅವರಲ್ಲಿ ಬಾಲಕೃಷ್ಣನನ್ನು ದರ್ಶಿಸಿದಳು. ಮೂರ್ತಿ ಪೂಜೆಯನ್ನು ಒಪ್ಪದ ವಿವೇಕಾನಂದರು ಅವರಲ್ಲಿ ರಾಧೆ ಯನ್ನು ಕಂಡರು. ಪುರಿಯಲ್ಲಿ ಜಗನ್ನಾಥನ ದರ್ಶನಕ್ಕೆ ಹೋದ ಸ್ವಾಮಿ ತುರೀಯಾನಂದರು, ಜಗನ್ನಾಥನ ವಿಗ್ರಹ ದಲ್ಲಿ ಶ್ರೀರಾಮಕೃಷ್ಣರು ಐಕ್ಯವಾಗುವುದನ್ನು ಕಂಡರು. ಕಾಶಿ ಯಲ್ಲಿ ಸ್ವಾಮಿ ಶಿವಾನಂದರಿಗೆ ಅವರು ಶಿವನಾಗಿ ದರ್ಶನ ವಿತ್ತರು. ಅಭೇದಾನಂದರು ಎಲ್ಲಾ ದೇವದೇವಿಯರೂ ಅವರಲ್ಲಿ ಐಕ್ಯವಾಗುವುದನ್ನು ಕಂಡು ಅವರನ್ನು **ಸರ್ವದೇವ ದೇವೀ ಸ್ವರೂಪಾಯ ಶ್ರೀರಾಮಕೃಷ್ಣಾಯ ನಮಃ** ಎಂದು ಕೊಂಡಾಡಿದರು.

ಈ ವಿವರಗಳು ಅವರ ಬಳಿ ಇದ್ದವರಿಗೆ ಕೊಟ್ಟ ದರ್ಶನವಾದರೆ, ಈಗ ಕೂಡ ಅಸಂಖ್ಯ ಭಕ್ತರು, ತಮ್ಮ ಜೀವನದಲ್ಲಿ ಅವರ ಆಗಮನದಿಂದ, ಪೂರ್ಣತೆಯನ್ನು ಪಡೆಯುತ್ತಿದ್ದಾರೆ. ಒಂದೇ ಒಂದು ಉದಾಹರಣೆ ಕೊಡುವು ದಾದರೆ, ಶ್ರೀರಾಮಕೃಷ್ಣ ಮಹಾಸಂಸ್ಥೆಯ ೧೦ನೆಯ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದರಿಗೆ, ಒಂದು ದಿನ ಅಮೆರಿಕದಿಂದ ಒಂದು ಪತ್ರ ಬಂದಿತು. ಸಂಘದ ಆಂಗ್ಲ ಮಾಸಪತ್ರಿಕೆಯಾದ 'ಪ್ರಬುದ್ಧ ಭಾರತದಲ್ಲಿ' ಆ ಪತ್ರ ೧೯೬೬ರಲ್ಲಿ ಪ್ರಕಟವಾಗಿದೆ. ಅದರಲ್ಲಿ ಒಬ್ಬ ವ್ಯಕ್ತಿ ಹೀಗೆ ಬರೆಯುತ್ತಾನೆ:

"ನನಗೆ ಯಾವುದೇ ತತ್ತ್ವಶಾಸ್ತ್ರವು ತಿಳಿಯದಿದ್ದರೂ, ನನಗೆ ಗೊತ್ತು ನಾನು ಶ್ರೀರಾಮಕೃಷ್ಣರನ್ನು ಪ್ರೀತಿಸುತ್ತೇನೆ ಮತ್ತು ಅವರು ನನ್ನನ್ನು ಪ್ರೀತಿಸುತ್ತಾರೆ. ನನ್ನ ಅತಿ ದೀರ್ಘ ವಾದ ಭಗವಂತನ ವ್ಯರ್ಥ ಹುಡುಕಾಟದ ಸಮಯದಲ್ಲಿ ಅವರು ನನ್ನ ಜೀವನವನ್ನು ಪ್ರವೇಶಿಸಿದರು. ನನಗೆ ತಿಳಿದ ಎಲ್ಲ ಮಾರ್ಗಗಳಲ್ಲೂ ನಾನು ಆ ಭಗವಂತನನ್ನು ಹುಡುಕಿದೆ. ಆದರೆ ಅದು ಕೊನೆಗೊಂಡದ್ದು ಕೇವಲ ಮಾನಸಿಕ ತೊಳಲಾಟದಲ್ಲಿ. ನಾನು ಅತ್ತೆ, ಸಹಾಯಕ್ಕಾಗಿ ಕರೆದೆ. ಶ್ರೀರಾಮಕೃಷ್ಣರು ನನ್ನೆಡೆಗೆ ಬಂದರು."

ಶ್ರೀರಾಮಕೃಷ್ಣರು ತಾವೇ ವಚನವೇದದಲ್ಲಿ ಹೇಳಿದ್ದಾರೆ, "ಯಾರೇ ಆಗಲಿ, ಎಲ್ಲೇ ಅಗಲಿ, ನಿಷ್ಠೆಯಿಂದ ದೇವರಿಗಾಗಿ

ಒಮ್ಮೆಯಾದರೂ ಹಂಬಲಿಸಿದರೆ, ಅತ್ತರೆ, ಖಂಡಿತ ಅವನು ಬರುತ್ತಾನೆ." ಅವರ ಮಾತನ್ನು ಅವರೇ ಉಳಿಸಿಕೊಳ್ಳುವುದಿಲ್ಲವೇ? ದೈವರೂಪಿಯಾದ ಶ್ರೀರಾಮಕೃಷ್ಣರು ತಾವೇ ಓಡಿ ಬರುತ್ತಾರೆ. ತಿಳಿದೋ ತಿಳಿಯದೆಯೋ ನಾವು ಅವರ ಬಳಿಗೆ ಬಂದಿದ್ದೇವೆ. ಅದರ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಅವರ ಬಳಿಗೆ ನಾವು ಬಂದಿದ್ದೇವೆಯೋ, ಅಥವಾ ಅಪಾರ ಕರುಣೆಯಿಂದ, ಅವರೇ ನಮ್ಮ ಬಳಿಗೆ ಬಂದಿದ್ದಾರೋ? ಅವರು ನಮ್ಮ ಹೃದಯದಲ್ಲಿ ಆಳವಾಗಿ ನೆಲೆ ನಿಂತಿದ್ದಾರೆ. ಬೇರೆಯವರಿಗಿಲ್ಲದ ಭಾಗ್ಯ ಅದು. ಇದರ ಪ್ರಯೋಜನವನ್ನು ಪಡೆಯದೆ ಮೂರ್ಖತನದಿಂದ ಇತ್ತ ಅತ್ತ ಹುಡುಕುತ್ತಿದ್ದೇವೆ. ಶ್ರೀರಾಮಕೃಷ್ಣರನ್ನು ಸಂಪೂರ್ಣವಾಗಿ ಅರಿತಿದ್ದ ಸ್ವಾಮಿ ವಿವೇಕಾನಂದರು, ತಮ್ಮ ಸ್ತೋತ್ರದಲ್ಲಿ ಶ್ರೀರಾಮಕೃಷ್ಣರನ್ನು **ಖಂಡನ ಭವಬಂಧನ**—ಸಂಸಾರ ಬಂಧನವನ್ನು ಕತ್ತರಿಸುವವರು—ಎಂದಿದ್ದಾರೆ. ಈ ದೇಶದಲ್ಲಿ ಎಷ್ಟೋ ಜನ ಸಂತರು ಬಂದು ಹೋಗಿದ್ದಾರೆ. ಅವರೆಲ್ಲ ಭಗವಂತನ ಸಾಕ್ಷಾತ್ಕಾರಕ್ಕೆ ಮಾರ್ಗವನ್ನು ತೋರಿಸಿದ್ದಾರೆ. ಆದರೆ, ಶ್ರೀರಾಮಕೃಷ್ಣರ ಒಂದು ವಿಶೇಷತೆ ಎಂದರೆ, ಅವರು **ಚಿರ ಉನ್ಮದ ಪ್ರೇಮಪಾಥಾರ್**—'ದಿವ್ಯಪ್ರೀತಿಯ ಉನ್ಮತ್ತ ಸಾಗರ'ವಾಗಿದ್ದರು. ಎಲ್ಲರಿಗೂ ಪ್ರೇಮಸುಧೆಯನ್ನು ನೀಡುವವರಾಗಿದ್ದರು. ನಮ್ಮವರಲ್ಲಿ ಒಂದಾಗಿ, ನಾವು ಸುಖದುಃಖ ಅನುಭವಿಸುವಾಗ, ನಮ್ಮಂತೆಯೇ ಅನುಭವಿಸಿ ಆದರೆ ಬೇರೆ ಯಾರೂ ಮಾಡದ ಒಂದು ಕಾರ್ಯವನ್ನು ಮಾಡುತ್ತಿದ್ದಾರೆ. ಅದೆಂದರೆ ದೇವರೆಡೆಗೆ ಕೈತೋರಿಸುತ್ತಿದ್ದಾರೆ. ಪ್ರಪಂಚದಲ್ಲಿರುವ ಎಲ್ಲಾ ಜೀವಿಗಳನ್ನೂ ಸಂಸಾರ ಬಂಧನದಿಂದ ಬಿಡಿಸಿ ಭಗವಂತನ ಪಾದಕ್ಕೆ ಸೇರಿಸಬೇಕು ಎನ್ನುವುದರಲ್ಲಿ ಕಾತರರಾಗಿದ್ದಾರೆ. ಭಗವಂತನ ಸಾಕ್ಷಾತ್ಕಾರ ಜೀವನದ ಗುರಿ ಅನ್ನುವುದನ್ನು ಹೆಜ್ಜೆ ಹೆಜ್ಜೆಗೂ ಎತ್ತಿ ಹಿಡಿಯುತ್ತಿದ್ದಾರೆ, ಜ್ಞಾಪಿಸುತ್ತಿದ್ದಾರೆ.

ಶ್ರೀರಾಮಕೃಷ್ಣರ ಜೀವನದ ಒಂದು ಸಾಮಾನ್ಯ ಘಟನೆಯನ್ನು ನೋಡೋಣ. ಒಂದು ದಿನ ದಕ್ಷಿಣೇಶ್ವರಕ್ಕೆ ಒಬ್ಬಳು ತಾಯಿ ಬಂದಳು. ಇವರು ಮಂಚದ ಮೇಲೆ ಕುಳಿತಿದ್ದರು. ಬಂದ ಹೆಂಗಸು ತುಂಬಾ ದುಃಖದಿಂದ ಅಳುತ್ತಿದ್ದಳು. ಅವರ ಎದುರಿಗೆ ಹಾಸಿದ್ದ ಚಾಪೆಯ ಮೇಲೆ ಅವಳು ಕುಳಿತಳು. ಶ್ರೀರಾಮಕೃಷ್ಣರು ನಿಧಾನವಾಗಿ, ಪ್ರೀತಿಯಿಂದ "ಯಾಕಮ್ಮಾ ಅಳುತ್ತಿದ್ದೀ" ಎಂದು ಆಕೆಯನ್ನು ಕೇಳಿದರು. ಆ ತಾಯಿ ತನ್ನ ಒಂದು ಪುಟ್ಟ ಮಗು ಸತ್ತುಹೋಯಿತು ಎಂದು ಹೇಳಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಶ್ರೀರಾಮಕೃಷ್ಣರು "ಜೀವನ ನಶ್ವರ, ಎಲ್ಲರೂ ಒಂದು ದಿನ ಸಾಯಬೇಕು" ಎಂಬ ವೇದಾಂತದ ಮಾತನಾಡಲಿಲ್ಲ. ಅವರ ವರ್ತನೆ ವಿಚಿತ್ರ ಎನಿಸಬಹುದು. ಅವರು ಮಂಚದಿಂದ ಥಟಗನೆ ಹಾರಿ ಆ ಹೆಂಗಸಿನ ಪಕ್ಕದಲ್ಲಿ ಕುಳಿತು, ತಾವೂ ಜೋರಾಗಿ ಗೋಳೋ ಎಂದು ಅಳಲಾರಂಭಿಸಿದರು. ನೋಡಿದವರಿಗೆ ಬಹುಶಃ ಇವರ ಮಗುವೇ ಸತ್ತುಹೋಗಿರಬೇಕೇನೋ ಎನಿಸಬೇಕು, ಹಾಗೆ ಅತ್ತರು. ಆ ತಾಯಿಯೂ ಗಾಬರಿಯಾಗಿಬಿಟ್ಟಳು. ಇದು ಕೃತಕ ಅಳುವಲ್ಲ. ಮಗು ಹೋಯಿತಲ್ಲ ಎಂದು ಹೃದಯದ ಆಳದಿಂದ ಬಂದ ದುಃಖ. ಸ್ವಲ್ಪ ಹೊತ್ತಿನ ಬಳಿಕ ಸುಧಾರಿಸಿಕೊಂಡು ಅವಳೊಡನೆ ಮಾತಾಡತೊಡಗಿದರು. ಸಂಭಾಷಣೆಯ ಮಧ್ಯೆ ಒಂದು ಸುಂದರವಾದ ಮಾತನ್ನು ಹೇಳಿದರು: "ನೋಡಮ್ಮಾ, ದುಃಖ ಹೋಗಲು ಒಂದು ಉಪಾಯವಿದೆ. ನೀನು ಪೂಜಿಸುವ ಭಗವಂತನಲ್ಲಿ ಆ ಮಗುವನ್ನು ಕಾಣು." ಆ ಮಾತು ಅವಳ ಮನಸ್ಸಿನ ಮೇಲೆ ಅದ್ಭುತ ಪರಿಣಾಮವನ್ನುಂಟುಮಾಡಿತು, ಅವಳಿಗೆ ಸಾಂತ್ವನವನ್ನು ನೀಡಿದ್ದಲ್ಲದೆ ಅವಳ ಜೀವನಗತಿಯನ್ನೇ ಬದಲಾಯಿಸಿತು.

ಶ್ರೀಕೃಷ್ಣ ಗೀತೆಯಲ್ಲಿ ದೇವರನ್ನು **ಸುಹೃದಂ ಸರ್ವಭೂತಾನಾಮ್** "ಎಲ್ಲಾ ಜೀವಿಗಳ ಸ್ನೇಹಿತ" ಎಂದಿದ್ದಾನೆ. ಇದು ಶ್ರೀರಾಮಕೃಷ್ಣರಿಗೆ ಎಷ್ಟು ಚೆನ್ನಾಗಿ ಒಪ್ಪುತ್ತದೆ! ಶ್ರೀರಾಮಕೃಷ್ಣರು ನಮಗಾಗಿ ಏನು ಮಾಡಿಲ್ಲ? ನಮ್ಮನ್ನು ಎಷ್ಟೆಲ್ಲ ಪ್ರೀತಿಸಿಲ್ಲ? ಚಿರಸಮಾಧಿಯಲ್ಲಿದ್ದಂತಹ ಮಹಾತ್ಮರನ್ನು ಅವರು ಕಂಡಾಗ, ತಕ್ಷಣ ತಮ್ಮ ಪ್ರೀತಿಯ ಕಾಳಿಯ ಮಂದಿರಕ್ಕೆ ಓಡಿಹೋಗಿ, ಕೈಮುಗಿದು, "ಅಮ್ಮಾ, ನನಗೆ ಮಾನವರೊಡನೆ ಸಂಬಂಧ ಬೆಳೆಸಬೇಕಾಗಿದೆ. ನಿನ್ನ ಭಕ್ತರೊಡನೆ ಬೆರೆಯಬೇಕಾಗಿದೆ. ನನ್ನ ಮನಸ್ಸನ್ನು ಎತ್ತರಕ್ಕೆ ಕೊಂಡೊಯ್ದು ಆ ಸಮಾಧಿಯಲ್ಲಿರುವ ಮಹಾತ್ಮರಂತೆ ಮಾಡಿ ಭಕ್ತರಿಂದ ದೂರ ಮಾಡಬೇಡ" ಎಂದು ಪ್ರಾರ್ಥಿಸುತ್ತಿದ್ದರು. ಎಂಥ ಮಾನವಾನುಕಂಪೆ! ರೊಮಾ ರೊಲಾ ಎನ್ನುವ ಫ್ರೆಂಚ್ ಲೇಖಕ ಅವರ ಬಗ್ಗೆ ಓದಿದಾಗ ಬಹಳ ಆನಂದ ಪಟ್ಟ. ಅವರ ಬಗ್ಗೆ ಫ್ರೆಂಚ್ ಜನರಿಗೆ ಬರೆಯುತ್ತಾನೆ, "ನನ್ನ ಮನಸ್ಸನ್ನು ಗೆದ್ದಿರುವ ಇಬ್ಬರು ವೀರರನ್ನು ನಿಮಗೆ ಪರಿಚಯಿಸುತ್ತೇನೆ." ಮುಂದಿನ ವಾಕ್ಯ ನೋಡಿ: "ನಾನು ಯೂರೋಪಿಗೆ ಅದು ಇಲ್ಲಿಯವರೆಗೆ ಕಂಡರಿಯದ ರಾಮಕೃಷ್ಣ ಎಂಬ ಹೆಸರಿನ ಒಂದು ಮಧುರ ಫಲವನ್ನು, ಒಂದು ಆತ್ಮಸಂದೇಶವನ್ನು, ಭಾರತದ ಸ್ವರಮೇಳವನ್ನು, ತರುತ್ತಿದ್ದೇನೆ." ಆ ಮಧುರ ಫಲವನ್ನು ಭಾರತೀಯರಾದ ನಾವು ಸವಿಯಬೇಡವೇ? ಧನ್ಯ, ಮಹಾಗುರುಗಳಾದ ಶ್ರೀರಾಮಕೃಷ್ಣರು. ಧನ್ಯ, ಅವರಲ್ಲಿ ಶರಣಾಗಿರುವ ಶ್ರೀರಾಮಕೃಷ್ಣರ ಭಕ್ತರು.

*